**1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನಾ.ದ. ಭದ್ರಾವತಿ**

**ಸಿ.ಸಿ ನಂಃ 3288/2023**

ಚಾ.ಸಾಃ 1 ಪ್ರಾ.ಸಾಃ 1

| | | |
|---|---|---|
| ಹೆಸರು | : | ರಾಜೇಶ |
| ತಂದೆಯ ಹೆಸರು | : | ಪ್ರಭಾಕರ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ದಾಸರಕಲ್ಲಹಳ್ಳಿ |

**ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ**

ನನಗೆ ಚಾ.ಸಾ–1 ರಿಂದ 8 ರವರ ಪರಿಚಯ ಇದೆ. ನನಗೆ ಆರೋಪಿತರ ಪರಿಚಯ ಇದೆ.

ನಾನು ಶಿವಮೊಗ್ಗ ಜಿಲ್ಲಾ ಡಾ. ಬಿ ಆರ್ ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷನಾಗಿ 2022 ನೇ ಇಸವಿಯಿಂದ ಕೆಲಸ ಮಾಡುತ್ತಿದ್ದೇನೆ. ದಿನಾಂಕಃ 15.02.2022 ರಂದು ನಮ್ಮ ಸಂಘಟನೆಗೆ ಆಶಾ ಕೋಂ ಶಿವಮೂರ್ತಿಯವರು ಅವರ ಮನೆಯ ಮೇಲೆ ಪಕ್ಕದ ಮನೆಯವರ ಮರದ ಕೊಂಬೆ ಬೀಳುವ ಸಾಧ್ಯತೆ ಇದೆ ಎಂದು ಅರ್ಜಿ ನೀಡಿರುತ್ತಾರೆ. ಈ ಬಗ್ಗೆ ದಾಸರಕಲ್ಲಹಳ್ಳಿ ಗ್ರಾಮ ಪಂಚಾಯ್ತಿ ಅಭಿವೃದ್ದಿ ಅಧಿಕಾರಿಗಳಿಗೆ ಮರದ ಕೊಂಬೆಯನ್ನು ಕಟಾವು ಮಾಡಿಸುವಂತೆ ತಿಳಿಸಿರುತ್ತೇವೆ. ಮರದ ಕೊಂಬೆಯನ್ನು ಕಟಾವು ಮಾಡುವುದಕ್ಕೆ ರೂ 2,000/– ಅಂಬೇಡ್ಕರ್ ಭವನದ ಮುಂದೆ ಇರುವ ಮರದ ಬುಡವನ್ನು ತೆಗೆಸಿದ್ದಕ್ಕೆ ರೂ 900/– ಎಸ್ ಸಿ ಕಾಲೋನಿ ಮುಂಭಾಗದ ರಸ್ತೆಗೆ ಮರಳು ಹೊಡೆಸಿದಕ್ಕೆ 1300/– ಒಟ್ಟು 4200/– ರೂಪಾಯಿಗೆ ಚೆಕ್ಕನ್ನು ನನಗೆ ಪಿ ಡಿ ಒ ರವರು ನೀಡಿದ್ದರು. ಈ ಕೆಲಸದ ವಿಚಾರವಾಗಿ ಆರೋಪಿತನು ತಂಟೆ ತಕರಾರು

ಮಾಡುತ್ತಾ ಬಂದಿರುತ್ತಾನೆ. ದಿನಾಂಕಃ **28.02.2022** ರಂದು ಆರೋಪಿತನು ಚಾ.ಸಾ–2 ರವರಿಗೆ ಕರೆ ಮಾಡಿ ನನ್ನ ಮನೆಯ ಮುಂದೆ ಒಂದು ಮರ ಬೀಳುವ ಸಾಧತೆ ಇದೆ ನಿಮ್ಮ ಸಂಘಟನೆಗೆ ಬಂದು ಮರವನ್ನು ಕಟಾವು ಮಾಡಲು ಅರ್ಜಿ ಕೊಡುವುದಾಗಿ ತಿಳಿಸಿರುತ್ತಾರೆ. ಅವರಿಗೆ ಸಂಜೆ 6.00 ಗಂಟೆಗೆ ಬರಲು ಚಾ.ಸಾ–**2** ರವರು ತಿಳಿಸಿರುತ್ತಾರೆ. ಆರೋಪಿತನು ರಾತ್ರಿ 9.00 ಗಂಟೆಗೆ ಬಂದು ಅಧ್ಯಕ್ಷರನ್ನು ಕರೆಯಲು ಚಾ.ಸಾ–2 ರವರಿಗೆ ಹೇಳಿದ್ದು, ನನಗೆ ಚಾ.ಸಾ–2 ರವರು ಕರೆ ಮಾಡಿದಾಗ ನಾನು ಎ ಕೆ ಕಾಲೋನಿ, ಮಾತಂಗಮ್ಮ ದೇವಾಸ್ಥಾನದ ಬಳಿ ಹೋಗಿರುತ್ತೇನೆ. ಆರೋಪಿತನು ಏನೋ ಸೂಳೆಮಗನೇ ನಿನ್ನದು ಬಹಳ ಅತಿಯಾಯಿತು ಎಂದು ಹೇಳಿ ನನಗೆ ಬೈದು ಬೈಕಿನಲ್ಲಿ ಇದ್ದ ಕಬ್ಬಿಣದ ರಾಡಿನಿಂದ ನನಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡಿರುತ್ತೇನೆ. ಆರೋಪಿತನು ನನ್ನ ಬಲಗೈಗೆ ಕೈಯಿಂದ ಹೊಡೆದಿದ್ದು ಚಾ.ಸಾ–**2** ಮತ್ತು **3** ರವರು ಜಗಳ ಬಿಡಿಸಿರುತ್ತಾರೆ. ಆರೋಪಿತನು ಇಷ್ಟಕ್ಕೆ ಸುಮ್ಮನೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿ ಹೋಗಿರುತ್ತಾನೆ. ನಾನು ಸಂಘಟನೆಯ ಹಿರಿಯ ಮುಖಂಡರೊಂದಿಗೆ ಚರ್ಚೆ ಮಾಡಿ ಆರೋಪಿತನ ವಿರುದ್ಧ 03.01.2022 ರಂದು ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ–**1** ಎಂದು**,** ಸಾಕ್ಷಿಯ ಸಹಿಯನ್ನು ನಿ.ಪಿ–**1** ಎ ಎಂದು ಗುರುತಿಸಲಾಯಿತು.

ದಿನಾಂಕಃ 08.01.2022 ರಂದು ಪೋಲೀಸರು ಘಟನಾ ಸ್ಥಳಕ್ಕೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಚಾ.ಸಾ–**4** ಮತ್ತು **5** ರವರ ಸಮಕ್ಷಮ ಬೆಳಗ್ಗೆ 11.30 ರಿಂದ 12.30 ರವರೆಗೆ ತಯಾರಿಸಿರುತ್ತಾರೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ–**2** ಎಂದು**,** ಸಾಕ್ಷಿಯ ಸಹಿಯನ್ನು ನಿ.ಪಿ–**2** ಎ ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿ.ಪಿ–**3** ಎಂದು**,** ಸಾಕ್ಷಿಯ ಸಹಿಯನ್ನು ನಿ.ಪಿ–**3** ಎ ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲಕ್ಕೆ ಒಂದು ಕಬ್ಬಿಣದ ರಾಡನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಬ್ಬಿಣದ ರಾಡನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಒ–**1**

ಎಂದು ಗುರುತಿಸಲಾಯಿತು. ನಾನು ಮರುಹೇಳಿಕೆಯಲ್ಲಿ ಆರೋಪಿತನು ರಾಡಿನಿಂದ ಹೊಡೆದಿರುವುದಿಲ್ಲ ಮತ್ತು ಹೊಡೆಯಲು ಬಂದಾಗ ತಪ್ಪಿಸಿಕೊಂಡಿರುತ್ತೇನೆ ಎಂದು ಹೇಳಿರುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎನ್ ಆರ್ ವಕೀಲರಿಂದ:**

ನಾನು ಬಿ ಎ ಪದವೀಧರ. ದಿನಾಂಕಃ 11.02.2022 ರಲ್ಲಿ ನಮ್ಮ ಸಂಘಟನೆ ನೊಂದಣಿಯಾಗಿರುತ್ತದೆ. ಆ ಬಗ್ಗೆ ದಾಖಲಾತಿ ಪೋಲೀಸರಿಗೆ ನೀಡಿದ್ದೇನೆ. ನನ್ನ ವಾಸದ ಮನೆ ದಾಸರಕಲ್ಲಹಳ್ಳಿಯಲ್ಲಿ ಇದೆ ಎಂದರೆ ಸರಿ. ದನಗಳ ಮುಪ್ಪತ್ತಿನ ಜಾಗದಲ್ಲಿ ಅಕ್ರಮವಾಗಿ ಮನೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಗೆ ಸಂಬಂಧಿಸಿದ ಇ–ಸ್ವತ್ತನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ ಕಾರಣ ಅವರು ಕೇಳಿರುವುದಿಲ್ಲ. ಆರೋಪಿ ಗ್ರಾಮ ಪಂಚಾಯ್ತಿಯ ಮಾಜೀ ಸದಸ್ಯ. ನಮ್ಮ ಸಂಘಟನೆಗೆ ಮರವನ್ನು ಕಟಾವು ಮಾಡುವ ಅಧಿಕಾರ ಇಲ್ಲ ಎಂದರೆ ಸರಿ. ಸಾಕ್ಷಿ ನಿರ್ಲಕ್ಷ್ಯತನ ಮಾಡಿದ ಕಾರಣ ನಮಗೆ ದುಃಖು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮರವನ್ನು ಕಟಾವು ಮಾಡಲು ನಾನು ಅರಣ್ಯ ಇಲಾಖೆಯವರಿಂದ ಪರವಾನಿಗೆ ಪಡೆದುಕೊಂಡಿಲ್ಲ. ಸಾಕ್ಷಿ ಪಿ ಡಿ ಒ ರವರು ಅನುಮತಿ ಪಡೆದುಕೊಂಡಿರುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಅನುಮತಿ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಪಿ ಡಿ ಒ ರವರು ಮರ ಕಡಿಯಲು ಲಿಖಿತವಾಗಿ ಹೇಳಿರುವುದಿಲ್ಲ. ಆಶಾರವರು ನೀಡಿದ ಅರ್ಜಿಯನ್ನು ಪೋಲೀಸರಿಗೆ ಹಾಜರುಪಡಿಸಿರುತ್ತೇನೆ. ಆಶಾರವರು ನಮ್ಮ ಸಂಘಟನೆಗೆ ಯಾವುದೇ ಅರ್ಜಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಕ್ರಮವಾಗಿ ನಾನು ದೇವಾಸ್ಥಾನದ ಮುಂಭಾಗದಲ್ಲಿದ್ದ ಮರವನ್ನು ಕಡಿದು ನಕಲಿ ಬಿಲ್ಲು ಮಾಡಿಸಿಕೊಒಾಂಡಿರುತ್ತೇನೆ ಎಂದರೆ ಸರಿಯಲ್ಲ. ಕಡಿದ ಮರದ ಕೊಂಬೆಯನ್ನು ಪಿ ಡಿ ಒ ರವರಿಗೆ ಹಸ್ತಾಂತರಿಸಿರುತ್ತೇನೆ. ಆ ಬಗ್ಗೆ ಪಿ ಡಿ ಒ ರವರಿಂದ ಪತ್ರ ಪಡೆದುಕೊಂಡಿರುವುದಿಲ್ಲ. ನಾನು ನಕಲಿ ಬಿಲ್ಲನ್ನು ಪಿ ಡಿ ಒ ರವರಿಂದ ಮಾಡಿಸಿಕೊಂಡ ಬಗ್ಗೆ ಆರೋಪಿ ತಕರಾರು ಮಾಡಿದ್ದ ಎಂದರೆ

ಸರಿಯಲ್ಲ. ಆದ್ದರಿಂದ ದ್ವೇಶದಿಂದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಸಂಘಟನೆಯ ಹೆಸರಿನಲ್ಲಿ ಆರೋಪಿತನಿಗೆ ಹಿಂಸೆ ನೀಡುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿತನು ಕಾಂಟ್ರಾಕ್ಟ್ ಕೆಲಸ ನೀಡದೇ ಇದ್ದ ಕಾರಣ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ–2 ಮತ್ತು 3 ರವರು ನಮ್ಮ ಸಂಘಟನೆಯ ಸದಸ್ಯರು ಎಂದರೆ ಸರಿ. ನಾನು ಜಯರಾಂ ರವರ ವಿರುದ್ದ ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಫೈನಾನ್ಸ್ ವಿಚಾರಕ್ಕೆ ಸಂಬಂಧಿಸಿದಂತೆ ಗಜೇಂದ್ರ ಕುಮಾರ್ ರವರ ವಿರುದ್ಧ ದೂರು ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ಸಹ ಮುಕ್ತಾಯಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಸಂಘಟನೆ ದಾಸರಕಲ್ಲಹಳ್ಳಿಯಲ್ಲಿ ಇರುತ್ತದೆ. ಬೆಳಗ್ಗೆ 10.00 ರಿಂದ 6.00 ಗಂಟೆಯವರೆಗೆ ಕೆಲಸ ಮಾಡುತ್ತೇವೆ. ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪೋಲೀಸರಿಗೆ ನೀಡಿದ್ದೇನೆ. ಯಾವುದೇ ದಾಖಲಾತಿ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ 08.03.2022 ರಂದು ಪೋಲೀಸರು ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಂ.ಒ–1 ರ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ಎಂ.ಒ–1 ನ್ನು ನಾನೇ ಪೋಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಎಂ.ಒ–1 ಮತ್ತು ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಸಂಘಟನೆಗೆ ಹಣಕಾಸಿನ ಸಹಾಯ ಆಗಲಿ ಎಂದು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಹಲ್ಲೆ ಮಾಡಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

ಪಂಚನಾಮೆ ಕಾಲಕ್ಕೆ 3–4 ಜನ ಸ್ಥಳೀಯರು ಮತ್ತು ಚಾ.ಸಾ–4 ಮತ್ತು 5 ರವರು ಇದ್ದರು. ಪಂಚನಾಮೆಗೆ ಇಬ್ಬರು ಸಹಿ ಮಾಡಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳ ಬಗ್ಗೆ

ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ.)
(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ನಾಸಿರಬಾನು)

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಭದ್ರಾವತಿ.